**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

**ದಿಃ 11/07/2022**
**ಅಸಲು ದಾವೆ.ನಂ.172/2015**
**ಪಿ.ಡಬ್ಲ್ಯೂ 1**

( ಮುಂದುವರೆದ ಪಾಟೀ ಸವಾಲುಃ ಶ್ರೀ. ಆರ್.ಕೆ.ಎಂ. ವಕೀಲರಿಂದ ಪ್ರತಿವಾದಿಯ ಪರ )

1 ನೇ ಪ್ರತಿವಾದಿಯ ತಾಯಿಯ ಹೆಸರು ಜಯಮ್ಮಃಉಃ ಭದ್ರಮ್ಮ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆಯ ಹೆಸರು ರಾಮೇಗೌಡ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಾಗೂ ಜಯಮ್ಮಃಉಃ ಭದ್ರಮ್ಮ ದಂಪತಿಗೆ 4 ಜನ ಮಕ್ಕಳು ಎಂದರೆ ಸರಿಯಲ್ಲ. ನಾನು ನನ್ನ ವಕೀಲರಿಗೆ ವಾದ ಪತ್ರದಲ್ಲಿ ಸದರಿಯವರಿಗೆ 4 ಜನ ಮಕ್ಕಳು ಎಂದು ಹೇಳಿ ಬರೆಸಿರುವುದು ಸರಿಯಲ್ಲ. ನನ್ನ ಗಂಡನ ಹೆಸರು ಈಶ್ವರೇಗೌಡ ಎಂದರೆ ಸರಿ. ನನ್ನ ಗಂಡನ ತಂದೆಯ ಹೆಸರು ಬಕ್ಕೇಗೌಡ ಎಂದರೆ ಸರಿ. ಬಕ್ಕೇಗೌಡರ ತಂದೆಯ ಹೆಸರು ಗೌಡೇಗೌಡ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಹಾಗೂ ಅವರ ತಂಗಿ ರಾಜಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲಿ ಹಿಸ್ಸೆ ಮಾಡಿಕೊಂಡಿರುವುದಿಲ್ಲ. ಸದರಿ ರಾಜಮ್ಮ ಈಗಲೂ ಬದುಕಿರುತ್ತಾರೆ ಎಂದರೆ ಸರಿ. ರಾಜಮ್ಮನವನ್ನು ಸಾಲಿಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ.

ಈಶ್ವರೇಗೌಡ ಎಂದರೆ ನನ್ನ ಗಂಡ ಹಾಗೂ 1 ಪ್ರತಿವಾದಿಯ ತಾಯಿ ಜಯಮ್ಮಃಉಃಭದ್ರಮ್ಮರವರು 1985-86 ನೇ ಸಾಲಿನಲ್ಲಿ ದಾವಾ ಸ್ವತ್ತನ್ನು ಸೇರಿಸಿ ಕುಟುಂಬದ ಆಸ್ತಿಗಳಲ್ಲಿ ಬಾಯಿ ಮಾತಿನ ವಿಭಾಗದ ಮುಖಾಂತರ ಜಮೀನುಗಳಿಗೆ ಸೇರಿದ ಮುಟೇಷನ್ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮುಟೇಷನ್ ನ ಪ್ರಕಾರ ಬಾಯಿ ಮಾತಿನ ವಿಭಾಗದಲ್ಲಿ ಜಯಮ್ಮಃಉಃ ಭದ್ರಮ್ಮನವರು ಚಿಕ್ಕಬೆಮ್ಮತ್ತಿ ಗ್ರಾಮದ ಸ.ನಂಃ 58/1 ಬಿ ರಲ್ಲಿ 1 ಎಕರೆ 2 ಗುಂಟೆ, ಸ.ನಂಃ47/4 ಪಿಯಲ್ಲಿ 2 ಗುಂಟೆ, ಸ.ನಂಃ125/2 ರಲ್ಲಿ 5 ಗುಂಟೆ ಹಾಗೂ ದಾವಾ ಸ್ವತ್ತಾದ ಸ.ನಂಃ85/3 ರಲ್ಲಿ 17 ಗುಂಟೆ ಜಮೀನನ್ನು ತಮ್ಮ ಹಿಸ್ಸೆಗೆ ಪಡೆದು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಈಶ್ವರೇಗೌಡ ರವರ ಹೇಳಿಕೆಯ ಮೇರೆಗೆ ಸದರಿ ಜಯಮ್ಮಃಉಃಭದ್ರಮ್ಮನವರ ಹಿಸ್ಸೆಗೆ ಮೇಲೆ ಹೇಳಿದ ಜಮೀನುಗಳು ಮುಟೇಷನ್ ಪ್ರಕಾರ ಹೋಗಿರುತ್ತದೆ ಎಂದರೆ ಸರಿಯಲ್ಲ. 1985-86 ರಲ್ಲಿ ಸದರಿ ಮುಟೇಷನ್ ಆದ ಬಗ್ಗೆ ನನಗೆ ಅಥವಾ ನನ್ನ

ಯಜಮಾನರಾದ ಈಶ್ವರೇಗೌಡರಿಗೆ ಗೊತ್ತಿರಲಿಲ್ಲ. ಸದರಿ ಮುಟೇಷನ್ ನಲ್ಲಿ ನಾನು ಪ್ರಶ್ನಿಸಿರುವುದಿಲ್ಲ, ಏಕೆಂದರೆ ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ. 1985-86 ರಲ್ಲಿ ಆದ ಮುಟೇಷನ್ ಪ್ರಕಾರ ಜಯಮ್ಮಃಉಃಭದ್ರಮ್ಮ ನವರ ಹೆಸರಿನಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 17 ಗುಂಟೆ ಜಮೀನಿನ ಕೈ ಬರಹದ ಪಹಣಿ ಅವರ ಹೆಸರಿಗೆ ಬರುತ್ತಿದೆ ಎಂದರೆ ಸರಿಯಲ್ಲ. ಹಾಗೆಯೇ ಸ.ನಂಃ125/2 ರಲ್ಲಿ ಸ.ನಂಃ47/4 ಹಾಗೂ ಸ.ನಂಃ 58/1 ಬಿ ರಲ್ಲಿ ಜಯಮ್ಮಃಉಃಭದ್ರಮ್ಮ ನವರ ಹೆಸರಿಗೆ ಬಂದ ಹಿಸ್ಸೆಯ ಜಮೀನಿನಲ್ಲಿ ಅವರ ವಾಸುದಾರರಾಗಿ 1 ನೇ ಪ್ರತಿವಾದಿಯವರು ಈಗ ಸ್ವಾಧೀನದಲ್ಲಿ ಇದ್ದು, ಅವರ ಹೆಸರಿನಲ್ಲಿ ಸದರಿ ಜಮೀನುಗಳ ಪಹಣಿ ಪತ್ರ ಬರುತ್ತಿದೆ ಎಂದರೆ ಸರಿಯಲ್ಲ

ಪ್ರತಿವಾದಿಯರು ದಾವಾ ಸ್ವತ್ತಾದ ನಂಃ 85/3 ರಲ್ಲಿ 17 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನಮಗೆ ತೊಂದರೆ ನೀಡಿದ್ದರಿಂದ ಪ್ರಸುತ್ತ ದಾವೆಯನ್ನು ಅವರ ವಿರುದ್ದ ಹೂಡಿರುತ್ತೇನೆ. ದಾವಾ ಸ್ವತ್ತಿನ ಪೂರ್ವಕ್ಕೆ ಪಾಪೇಗೌಡರ ಜಮೀನು, ಪಶ್ಚಿಮಕ್ಕೆ ಪುಟ್ಟೇಗೌಡರ ಜಮೀನು, ಉತ್ತರಕ್ಕೆ ತಮ್ಮೇಗೌಡರ ಜಮೀನು, ಸದರಿ ತಮ್ಮೇಗೌಡ ಎಂದರೆ ಈ ದಾವೆಯ ಪ್ರತಿವಾದಿ, ದಕ್ಷಿಣಕ್ಕೆ ನಿಂಗಮ್ಮ ಜಮೀನು ಎಂದರೆ ನನ್ನ ಜಮೀನು ಇರುತ್ತದೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ಬರುವ ನನ್ನ 17 ಗುಂಟೆ ಜಮೀನಿಗೆ ಚೆಕ್ಕು ಬಂದಿ ಹೇಳಬಲ್ಲೆ, ಸದರಿ ಜಮೀನಿನ ಪೂರ್ವಕ್ಕೆ ಪಾಪೇಗೌಡರ ಜಮೀನು, ಪಶ್ಚಿಮಕ್ಕೆ ತಮ್ಮೇಗೌಡರ ಜಮೀನು, ಉತ್ತರಕ್ಕೆ ಮುತ್ತೇಗೌಡರ ಜಮೀನು, ದಕ್ಷಿಣಕ್ಕೆ ನಿಂಗಮ್ಮನ ಜಮೀನು, ಎಂದರೆ ನನ್ನ ಜಮೀನು.

( ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು.)

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**